


## ಬೆಡ್‌ಇಟ್ ಸ್ಮಾರ್ಟ್

ಇದು ಆ್ಯಪಲ್ ವಾಚ್ ಆ್ಯಪ್ ಆಗಿದ್ದು, ಸೆನ್ಸರ್ ಡಿವೈಸ್ ಜೊತೆ ಸಮನ್ವಯಗೊಳಿಸಲಾಗಿದೆ. ವ್ಯಕ್ತಿಯ ನಿದ್ರೆಯನ್ನು ಅಳೆಯುವ ಆ್ಯಪ್. ವ್ಯಕ್ತಿಗತ ಸಲಹೆ ನೀಡುವುದಲ್ಲದೇ ಗುಣಮಟ್ಟದ ನಿದ್ರೆ ಕುರಿತು ಸೂಕ್ತ ಮಾಹಿತಿಯ ವ್ಯವಸ್ಥೆಯೂ ಇದೆ. ಇದನ್ನು ಆ್ಯಪಲ್ ಸ್ಟೋರ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆ್ಯಪಲ್.ಕಾಮ್‌ನಲ್ಲೂ ಲಭ್ಯ. ಹಾಸಿಗೆಯ ಅಡಿಯಲ್ಲಿ ಅತ್ಯಂತ ತೆಳುವಾದ ಸೆನ್ಸರ್ ಇಡಲಾಗುವುದು. ಇದನ್ನು ಆ್ಯಪಲ್ ವಾಚ್ ಹಾಗೂ ಐಒಎಸ್ ಡಿವೈಸ್ (ಐಫೋನ್ ಅಥವಾ ಐಪ್ಯಾಡ್) ಜೊತೆ ಸಂಪರ್ಕಿಸಲಾಗುವುದು. ನಿದ್ರಾ ಸಮಯದಲ್ಲಿ ಇದು ಸ್ವಯಂಚಾಲಿತವಾಗುವುದಲ್ಲದೇ ಹೃದಯದ ಬಡಿತ, ಶ್ವಾಸೋಚ್ಛ್ವಾಸ, ಚಲನೆ, ಗೊರಕೆ ಹಾಗೂ ನಿದ್ರೆಯನ್ನು ಅಳೆಯುವುದು. ಬೆಳಿಗ್ಗೆ ಒಟ್ಟಾರೆ ನಿದ್ರಾ ಗುಣಮಟ್ಟದ ಅಂಕ ನೀಡಿ, ಇದರ ಆಧಾರದ ಮೇಲೆ ಸುಧಾರಣೆ ಕುರಿತು ಸಲಹೆ ನೀಡುವುದು. ಆ್ಯಪಲ್ ವಾಚ್ ಸದ್ಯದಲ್ಲೇ ಭಾರತದಲ್ಲಿ ಲಭ್ಯವಾಗಲಿದೆ.

## ಆ್ಯಪಲ್ ಮ್ಯಾಪ್ಸ್

ಸುಧಾರಿತ ಮ್ಯಾಪ್ ಆಗಿದ್ದು ರಸ್ತೆ ಸಂಚಾರ ಸುಗಮವಾಗಿದ್ದರೆ ಸೂಚನೆ ನೀಡುವುದಲ್ಲದೇ ತಿರುವು ತೆಗೆದುಕೊಳ್ಳುವಾಗ ನಿರ್ದೇಶನ ನೀಡುವುದು. ಈ ಉಚಿತ ಆ್ಯಪ್ ಬಿಡುಗಡೆಯಾದಾಗ ಬಳಕೆದಾರರಿಗೆ ತೀರಾ ಕೆಟ್ಟ ಅನುಭವವಾಗಿತ್ತು. ಇಲ್ಲದ ರಸ್ತೆಗಳು, ವಿದೇಶಗಳ ರಸ್ತೆಗಳ ಬಗ್ಗೆ ಮಾಹಿತಿ ನೀಡಿ ನಗೆಪಾಟಲಿಗೀಡಾಗಿತ್ತು. ಆ ಸಂದರ್ಭದಲ್ಲಿ ಗೂಗ್ಲ್ ಮ್ಯಾಪ್ ನೆರವಿಗೆ ಬಂತು. ಆದರೆ ಈಗ ಆ್ಯಪಲ್ ಮತ್ತೆ ಇದನ್ನು ಸುಧಾರಿಸಿ ಬಿಡುಗಡೆ ಮಾಡಿದೆ. ಇದನ್ನು ತೆರೆದಾಗ ನಿಮ್ಮ ಪ್ರಸಕ್ತ ಸ್ಥಳದ ನಕಾಶೆ ಕಾಣುತ್ತದೆ. ನೀವು ನಿಮ್ಮ ವಿಳಾಸವನ್ನು ನೀಡಿ ಹುಡುಕಾಟ ನಡೆಸಬಹುದು. ಸಿರಿ ಮೂಲಕ ದನಿ ಆದೇಶಗಳನ್ನೂ ಪಡೆಯಬಹುದು.







## ಸ್ಪೋರ್ಟಿಫೈ

ಇದು ಅತ್ಯುತ್ತಮ ಸಂಗೀತ ಸೇವೆ ನೀಡುವ ಆ್ಯಂಡ್ರಾಯ್ಡ್ ಮತ್ತು ಐಒಎಸ್ ಆ್ಯಪ್ ಆಗಿದ್ದು, ನಿರಂತರ ಸಂಗೀತದ ಹರಿವಿಗೆ ಹೇಳಿ ಮಾಡಿಸಿದಂತಹದ್ದು. ಈ ಹಿಂದೆಯೇ ಇದನ್ನು ಬಿಡುಗಡೆ ಮಾಡಲಾಗಿದ್ದರೂ ಪ್ರಸಕ್ತ ಜಾಹೀರಾತು ಬೆಂಬಲಿತ ಆವೃತ್ತಿಯನ್ನು ಶುರು ಮಾಡಲಾಗಿದ್ದು, ಉಚಿತ ಸೇವೆ ಎಂದು ಬಿಂಬಿಸಲಾಗಿದೆ. ಹೆಚ್ಚು ಮಂದಿ ಶ್ರೋತೃಗಳನ್ನು ಸೆಳೆಯುವ ಉದ್ದೇಶ ಹೊಂದಿದ್ದು, ಜಾಹೀರಾತು ಇಲ್ಲದ, ಮಧ್ಯೆ ತಡೆಯಿಲ್ಲದ ಸಂಗೀತದ ಬೇಡಿಕೆಗಳನ್ನಿಟ್ಟರೆ ಶುಲ್ಕ ನೀಡಬೇಕಾಗುತ್ತದೆ. 15 ದಶಲಕ್ಷಕ್ಕೂ ಅಧಿಕ ವೈವಿಧ್ಯಮಯ ಸಂಗೀತದ ಟ್ರ್ಯಾಕ್‌ಗಳ ಸಂಗ್ರಹವಿದ್ದು, ಸಲಹೆಗಳನ್ನು ನೀಡಿದರೆ ಅದನ್ನೂ ಸಂಗ್ರಹಕ್ಕೆ ಸೇರಿಸಲಾಗುವುದು. ಫೇಸ್‌ಬುಕ್ ಗೆಳೆಯರ ಪ್ಲೇಲಿಸ್ಟ್‌ಗೂ ಪ್ರವೇಶ ಕೊಡಬಹುದು.

## ವೇಝ್

ಇದು ಚಾಲಕರಿಗಾಗಿರುವ ಐಫೋನ್ ಆ್ಯಪ್. ಸ್ಥಳ, ಸಂಚಾರ ದಟ್ಟಣೆಯ ಜೊತೆಗೆ ರಸ್ತೆ ಕುರಿತು ತಮಗಿರುವ ಮಾಹಿತಿಯನ್ನೂ ಹಂಚಿಕೊಳ್ಳಬಹುದು. ಜಿಪಿಎಸ್ ನ್ಯಾವಿಗೇಶನ್ ಅನ್ನು ಇನ್ನಷ್ಟು ಸುಧಾರಿಸಲಾಗಿದೆ. ದನಿ ಆಧಾರಿತ ಸೂಚನೆಗಳು ಲಭ್ಯ. ಉಚಿತ ಆ್ಯಪ್ ಆಗಿದ್ದು, ಈ ಆ್ಯಪ್‌ನ ಇತರ ಬಳಕೆದಾರ ಚಾಲಕರು ಆಸುಪಾಸಿನಲ್ಲಿದ್ದರೆ ಸೂಚನೆ ನೀಡುತ್ತದೆ. ಆದರೆ ಗೂಗ್ಲ್ ಮ್ಯಾಪ್ ತರಹ ನಡಿಗೆದಾರರು ಇದನ್ನು ಬಳಸಲು ಸಾಧ್ಯವಿಲ್ಲ.



■ ಎಸ್. ತುಂಬೆ